ಕರ್ನಾಟಕ ಸರ್ಕಾರ

ಮೇ 19, 2017

# ಅನುರಾಗ್ ತಿವಾರಿ ನಿಗೂಢ ಸಾವು ಪ್ರಕರಣ ಕುರಿತು ಸಮಗ್ರ ತನಿಖೆ ಮಾಡಿಸುವಂತೆ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರಿಗೆ ಒತ್ತಾಯಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರ

**ಬೆಂಗಳೂರು, ಮೇ 19:**

ಲಕ್ನೋದ ಹಜರತ್ ಗಂಜ್ ಪ್ರದೇಶದಲ್ಲಿನ ಮೀರಾಬಾಯಿ ಅತಿಥಿ ಗೃಹದಲ್ಲಿ ತಂಗಿದ್ದ ಕರ್ನಾಟಕ ವೃಂದದ 2007 ನೇ ತಂಡದ ಭಾರತೀಯ ಆಡಳಿತ ಸೇವಾ ಅಧಿಕಾರಿ ಅನುರಾಗ್ ತಿವಾರಿ ಅವರ ನಿಗೂಢ ಸಾವು ಪ್ರಕರಣಕ್ಕೆ ಸಂಬಂಧಿಸಿದಂತೆ ವೃತ್ತಿಪರ ಹಾಗೂ ಸಮರ್ಥ ತನಿಖಾಧಿಕಾರಿಗಳ ತಂಡದ ಮೂಲಕ ಸಮಗ್ರ ತನಿಖೆ ಮಾಡಿಸುವಂತೆ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರಿಗೆ ಒತ್ತಾಯಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಲ್ಲಿ ಇಂದು ಪತ್ರ ಬರೆದಿದ್ದಾರೆ.

ಕರ್ನಾಟಕ ವೃಂದದಲ್ಲಿ ಸಮರ್ಥ ಅಧಿಕಾರಿ ಎನಿಸಿದ್ದ ಅನುರಾಗ್ ತಿವಾರಿ ಅವರ ಅಕಾಲಿಕ ಹಾಗೂ ದುರದೃಷ್ಟಕರ ಸಾವು ನಮ್ಮೆಲ್ಲರಲ್ಲೂ ತೀವ್ರ ಕಳವಳವನ್ನು ಉಂಟು ಮಾಡಿದೆ. ಈ ಹಿನ್ನೆಲೆಯಲ್ಲಿ ತಿವಾರಿ ಅವರ ಸಾವು ಸಂಭವಿಸಿದ್ದು ಹೇಗೆ ? ಹಾಗೂ ಸಾವಿಗೆ ಕಾರಣ ಏನು ? ಎಂಬ ಸಂದರ್ಭಗಳನ್ನೂ ಒಳಗೊಂಡಂತೆ ವೃತ್ತಿಪರ ಹಾಗೂ ಸಮರ್ಥ ತನಿಖಾಧಿಕಾರಿಗಳ ತಂಡದ ಮೂಲಕ ಸಮಗ್ರ ತನಿಖೆ ಮಾಡಿಸುವತ್ತ ಅಗತ್ಯ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ತಮ್ಮ ಪತ್ರದಲ್ಲಿ ಮನವಿ ಮಾಡಿದ್ದಾರೆ.

*************

ಡಿ ಪಿ ಎಂ